ISSN : 2581-7728
Tumbe International e-Magazine
A Multilanguage Magazine
Issue-2
Volume-3
July-Dec: 2020

# ಗುರುವೇ ನಿಮ್ಮಲ್ಲಿ ಇಲ್ಲಾ ಎಳ್ಳಷ್ಟೂ ಅಹಂ

**ನಂದನ್ ಬಿ ಎನ್**
(Nandan B N)
Student-II BSc PCM
Government First Grade College, Tumkur, India
Mob: 8088875697 email : nandanbdpura@gmail.com

ಗುರುವೇ ನಿಮ್ಮಲ್ಲಿ ಇಲ್ಲಾ ಎಳ್ಳಷ್ಟೂ ಅಹಂ
ಸರಳತೆಯಲ್ಲಿ ನೀವು ಅಬ್ದುಲ್ ಕಲಾಂ
ನಿಮಗಿದೆ ನನ್ನ ಸಾವಿರ ಸಲಾಂ
ನಿಮ್ಮ ಒಡಲು ತಾಯಿಯ ಮಡಿಲು
ನಿಮ್ಮಲ್ಲಿಹುದು ಕರುಣೆಯ ಕಡಲು
ನಾವೆಲ್ಲಾ ಆದೇವು ನಿಜಕ್ಕೂ ದಿಗಿಲು

ನಿಮ್ಮ ಮುಖದ ಕಾಂತಿಯನ್ನು ನೋಡಿ
ನಾಚಿದ ಬಾನಿನ ಸೂರ್ಯ
ನಿಮ್ಮಲ್ಲಿ ಅಡಗಿಹುದು ಸಿಂಹ ಹೃದಯದ ಧೈರ್ಯ
ನಿಮ್ಮಲ್ಲಿದೆ ಆಳವನ್ನು ಅರಿಯದ ಮನೋಸ್ಥೈರ್ಯ
ನೀವು ಮಾಡುವಿರಿ ಸದಾ ಸತ್ಕಾರ್ಯ

ನೀವು ಬಲ್ಲಿರಿ ಸಕಲ ಜ್ಞಾನ
ತೊಡೆದು ಹಾಕಿದಿರಿ ನಮ್ಮ ಅಜ್ಞಾನ
ನಿಮ್ಮಿಂದ ಹೆಚ್ಚಿತು ನಮ್ಮ ಸುಜ್ಞಾನ
ಇದಕ್ಕೆಲ್ಲಾ ಕಾರಣ ನಿಮ್ಮ ಜ್ಞಾನ

ನಾವೆಂದು ಕಾಣಲಿಲ್ಲ ನಿಮ್ಮ ಮುಗದಲ್ಲಿ ಮುನಿಸು
ನಿಮ್ಮ ಕೈಯಲ್ಲಿ ಕಲಿತಿದ್ದು ನಿಜವಾಗಲೂ ಒಂದು ಕನಸು
ಸದಾ ನಿಮ್ಮೊಡನೆ ಇರಬೇಕೆಂದು ಬಯಸುತ್ತಿದೆ ಮನಸ್ಸು
ಎಲ್ಲ ಬಲ್ಲ ಬುದ್ಧಿವಂತ ಸರಳ ಸಜ್ಜನಿಕೆಯ ಶ್ರೀಮಂತ

ಸರ್ವಕಾಲಕ್ಕೂ ಸತ್ಯವಂತ

ನಾನು ಕಂಡ ಹೃದಯವಂತ

ನಮಗೆಲ್ಲ ಆದರ್ಶ ನಿಮ್ಮಯ ತತ್ವ

ನಮಗೀಗ ತಿಳಿಯುತ್ತಿದೆ ನಿಮ್ಮ ಮಹತ್ವ

ನೀವಿರದ ದಿನಗಳು ಬರೀ ಕಾಲ ಹರಣ

ಕಣ್ಣಿದ್ದೂ ನಾನು ಕುರುಡ ವಿದ್ಯಾರ್ಥಿ

ನಮಗೆಲ್ಲ ಬೇಕು ನಿಮ್ಮಂತ ಸಾರಥಿ

ನಿಜಕ್ಕೂ ನೀವು ಪ್ರೇಮ ಮೂರ್ತಿ

ನೀವೇ ನಮಗೆಲ್ಲ ನಿಜವಾದ ಸ್ಫೂರ್ತಿ

ಏಕಲವ್ಯನ ಯಶಸ್ಸಿಗೆ ಆ ಗುರುಮೂರ್ತಿ

ನಮ್ಮೆಲ್ಲರ ಯಶಸ್ಸಿಗೆ ಈ ಗುರುಮೂರ್ತಿ

ಎಲ್ಲೆಡೆ ಹಬ್ಬಲಿ ನಿಮ್ಮ ಕೀರುತಿ

ಕವನದ ರೂಪದಲ್ಲಿ ನಾ ಬೆಳಗುವೆ ನಿಮಗೆ ಆರತಿ.